KARNATAKA REGIONAL ORGANISATION FOR SOCIAL SERVICE
KROSS

ಖಾಸಗಿ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 21 ಜನವರಿ 2015 – ಮಾರ್ಚ್ 2015

## ಈ ಭೂಮಿ ಯಾರದ್ದು?



ಮುಖ್ಯ ಸಂಪಾದಕರು :

**ಸ್ವಾಮಿ ಪೀಟರ್ ಬ್ಲ್ಯಾಂಕ್**

ಸಹ ಸಂಪಾದಕರು :

**ಸ್ವಾಮಿ ಸೆಬಾಸ್ಟಿನ್ ಫೆರ್ನಾಂಡಿಸ್**

ಮುಖಪುಟ ವಿನ್ಯಾಸ :

**ಅನೂಷ ಗ್ರಾಫಿಕ್ಸ್**

ಒಳ ಪುಟಗಳಲ್ಲಿ :

**ಭೂ ಒಡೆಯನ್ಯಾರು?**
ಶ್ರೀ ಜೆ.ಟಿಎಂ. ವರ್ಗೀಸ್

**ಕೃಷಿಯಲ್ಲಿ ಬಹು ಉಪಕಾರಿ ಪರಿಣಾಮಕಾರಿ ಸಾವಯವ ಸೂಕ್ಷ್ಮ ಜೀವಿಗಳು (ಇ. ಎಮ್.)**
ಶ್ರೀಮತಿ ಜಾಯ್ಸ್ ಎಮ್ ಪಿರೇರ

**ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು**
ಶ್ರೀ ಜೆ.ಟಿಎಂ. ವರ್ಗೀಸ್

**ವಾರ್ತಾ ವಿಶೇಷ**
ಶ್ರೀ ರಿಚ್ಚರ್ಡ್ ಮಾರ್ಟಿಸ್

## ಓದುಗರೊಂದಿಗೆ ಕ್ಷಣ ಹೊತ್ತು ...



ಜ್ಞಾನ ಬಲದಿಂದ ಅಜ್ಞಾನದ ಕೇಡು ನೋಡಯ್ಯ
ಜ್ಯೋತಿಯ ಬಲದಿಂದ ಅಂಧದ ಕೇಡು ನೋಡಯ್ಯ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ
ಪುರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ – **ಬಸವಣ್ಣ**

ಪ್ರತಿಯೊಬ್ಬ ಮನುಷ್ಯನು ತನ್ನ ಶ್ರಮದಿಂದ ಪ್ರಗತಿಯ ದಾರಿಯನ್ನು ಕಾಣಲು ಇಚ್ಛಿಸುತ್ತಾನೆ. ಸರ್ಕಾರಗಳು ಜನರಿಗೋಸ್ಕರ ಬಹಳಷ್ಟು ಪ್ರಗತಿಪರ ಯೋಜನೆಗಳನ್ನು ಜಾರಿಗೊಳಿಸಿವೆ. ಬಹಳಷ್ಟು ಮಸೂದೆಗಳು ಮಂಡನೆಯಾಗಿವೆ. ಆದರೆ ಇವೆಲ್ಲವು ಎಷ್ಟರ ಮಟ್ಟಿಗೆ ಬಡತನ ನಿವಾರಣೆಗೆ ಸಹಾಯಕವಾಗಿವೆ? ಉಳ್ಳವರು ಅಭಿವೃದ್ಧಿಯ ಪ್ರತಿಫಲ ಅಧಿಕ ಪಡೆಯುತ್ತಾ ಸಾಗಿದರೆ, ಇಲ್ಲದವರು ದಿನೇ ದಿನೇ ಅಂಚಿಗೆ ತಳ್ಳಲ್ಪಡುತ್ತಿದ್ದಾರೆ. ಜಗತ್ತಿನಾದಾದ್ಯಂತ ಇರುವ ಕುಟುಂಬಗಳಿಗೆ ಅತ್ಯಂತ ಅಮೂಲ್ಯವಾದ, ಸ್ಪರ್ಶಿಸಬಹುದಾದ ಆಸ್ತಿ ಎಂದರೆ ಭೂಮಿಯಾಗಿದೆ. ಕುಟುಂಬಗಳು ಭೂಮಿಯನ್ನು ಹೊಂದಿ ಅನುಭವಿಸಿ ಅದನ್ನು ತಮ್ಮ ಮುಂದಿನ ಜನಾಂಗಕ್ಕೆ ವರ್ಗಾಯಿಸಿ ಸಂರಕ್ಷಣೆಯೊಂದಿಗೆ ಸುಸ್ಥಿರತೆಯನ್ನು ಒದಗಿಸುತ್ತವೆ. ಹಾಗಿದ್ದರೂ ಭಾರತದಲ್ಲಿ ಕೆಲವು ಗೊಂದಲ ಮತ್ತು ಸಂಕೀರ್ಣವಾಗಿರುವ ಸಾಮಾಜಿಕ ಕಾರಣಗಳು ಅವುಗಳನ್ನು ಋಣಭಾರ ಮತ್ತು ಭೂರಹಿತರನ್ನಾಗಿ ಮಾಡುತ್ತಿವೆ. ಪ್ರಪಂಚದ ಇತರೆ ಭಾಗಗಳಲ್ಲಿ ಇರುವಂತೆ ಗ್ರಾಮೀಣ ಭಾರತದಲ್ಲಿ ಬಡತನಕ್ಕೆ ಮೂಲ ಕಾರಣವೆಂದರೆ ಭೂಮಿಯ ನಿಯಂತ್ರಣ ಮತ್ತು ಭೂಮಿಯ ಬಳಕೆ.

ಶೋಷಿತರು/ರೈತರು ತಮ್ಮ ವಂಶಪರಂಪರಾಗತವಾಗಿ ಬಂದ ಅಲ್ಪ ಸ್ವಲ್ಪ ಭೂಮಿಯನ್ನು ಅಭಿವೃದ್ಧಿಗೊಳಿಸಿ ತಮ್ಮ ಜೀವನವನ್ನು ಸಾಗಿಸಲು ಚಡಪಡಿಸುತ್ತಿರುವಾಗ, ಭೂ ಸ್ವಾಧೀನ ಕಾಯಿದೆಗಳನ್ನು ತಂದು ಎಷ್ಟರ ಮಟ್ಟಿಗೆ ಅವರ ಹಿತ ಕಾಯಲಿದೆ. ಹಾಗಾದರೆ ಭಾರತದ ಬೆನ್ನೆಲುಬಾಗಿರುವ, ನಮಗೆ ಅನ್ನದಾನವನ್ನು ನೀಡುತ್ತಿರುವ ನಮ್ಮ ದೇಶದ ರೈತರು ಅವರ ಭೂಮಿಯನ್ನು ಕಳೆದುಕೊಂಡರೆ, ಅವರು ಹೋಗುವುದಾದರೂ ಎಲ್ಲಿಗೆ? ಅಭಿವೃದ್ಧಿ ಹೆಸರಿನಲ್ಲಿ ಲಕ್ಷಾಂತರ ರೈತರ ಮತ್ತು ಆದಿವಾಸಿಗಳ ಬದುಕಿನ ಮೇಲೆ ಆಗಲಿರುವ ಪರಿಣಾಮಗಳು ಭವಿಷ್ಯದಲ್ಲಿ ಇನ್ನಷ್ಟು ಸಮಸ್ಯೆಗಳಿಗೆ ಎಡೆಮಾಡಿಕೊಡಲಿವೆ. ಪರ್ಯಾಯ ಉದ್ಯೋಗ ಮಾಡಲು, ಅವರ ಕೌಶಲ್ಯ ಅಭಿವೃದ್ಧಿ ಕಾರ್ಯಗಳೇನಾದರು ರೂಪಿಸಲ್ಪಟ್ಟಿವೆಯೇ ?

ಪ್ರತಿಯೊಬ್ಬ ಪ್ರಜೆ ದೇಶದ ಪ್ರಗತಿಗೆ ಕೈಜೋಡಿಸುವುದು ಅವಶ್ಯಕ. ಆದರೆ, ಭೂ ಸ್ವಾಧೀನ ಹಕ್ಕು ಕಾಯಿದೆ 2013ರ ಪ್ರಕಾರ ಪುನರ್ವಸತಿ ಮತ್ತು ಪರಿಹಾರದಲ್ಲಿ ಪಾರದರ್ಶಕತೆ ಮತ್ತು ನ್ಯಾಯತ ಪರಿಹಾರವನ್ನು ಪಡೆದುಕೊಳ್ಳುವುದು ಪ್ರಜೆಯ ಹಕ್ಕಾಗಿದೆ. ಹಿಂದಿನ ಸರಕಾರ ನೀಡಿದ ಭೂ ಸ್ವಾಧೀನ ಕಾಯಿದೆ ಸ್ವಲ್ಪ ಮಟ್ಟಿಗಾದರೂ ಜನಪರ/ರೈತಪರ ಎನ್ನಲಾಗಿತ್ತು. ಆದರೆ ಪ್ರಸ್ತುತ ಪ್ರಸ್ತಾವಿತ ಕಾಯಿದೆಯಲ್ಲಿ ಭೂಮಿ ಕಳೆದುಕೊಂಡ ಜನರಿಗೆ/ರೈತರಿಗೆ ತಕ್ಕ ನ್ಯಾಯ ಒದಗಿಸುವ ಅಂಶಗಳು ಕಾಣುವುದಿಲ್ಲ.

ಭೂ ಸ್ವಾಧೀನ ಕಾಯಿದೆಗೆ ತುತ್ತಾಗಿರುವ ಜನರ ಪರಿಸ್ಥಿತಿ ವಿಶ್ಲೇಷಿಸಿದರೆ ನಮಗೆ ತಿಳಿದುಬರುವ ಅಂಶ ಎಂದರೆ, ಒಂದೆಡೆ ಭೂಮಿ ಕಳೆದುಕೊಂಡಿದ್ದರೆ, ಇನ್ನೊಂದೆಡೆ ಸಿಕ್ಕ ಪರಿಹಾರ ಸೂಕ್ತ ರೀತಿಯಲ್ಲಿ ಉಪಯೋಗಿಸದೆ ದಿವಾಳಿಯಾಗಿ, ಕೂಲಿಕಾರ್ಮಿಕರಾಗಿ ದುಡಿದು ಹೊಟ್ಟೆ ತುಂಬಿಸಿಕೊಳ್ಳುವ ಪರಿಸ್ಥಿತಿಗೆ ತಲಪುವ ಸ್ಥಿತಿಯಾಗಬಹುದು. ಈ ನಿಟ್ಟಿನಲ್ಲಿ "ಪ್ರಸ್ತುತಿ" ಬೆಳಕು ಚೆಲ್ಲುತ್ತದೆ. ಎಂದಿನಂತೆ "ಸರ್ಕಾರಿ ಸವಲತ್ತು"ಗಳ ಸರಮಾಲೆ ಮುಂದುವರಿದಿದೆ. ಎಲ್ಲಾ ಕಾರ್ಯಕರ್ತರು ನಮ್ಮ ಪಾಲುದಾರ ಸಂಸ್ಥೆಗಳ ಸಿಬ್ಬಂಧಿಗಳು "ಅಲೆಗಳ"ನ್ನು ಜನರಿಗೆ ತಲುಪಿಸಲು ಮನಸ್ಸು ಮಾಡಬೇಕು ಅವರ ಅರಿವಿನ ಮಟ್ಟ ಅಧಿಕವಾಗಬೇಕು. ಆಗ ಮಾತ್ರ ಭೂ ಮಸೂದೆಯಂಥಹ ವಿಚಾರಗಳು ಜನಸಂಘಟನೆಗಳಲ್ಲಿ ಚರ್ಚಿತವಾಗುತ್ತದೆ.

ಬೇಸಿಗೆಯ ಬೇಗೆ ಪ್ರಾಂಭವಾಗಿದೆ. ನೀರಿನ ಬವಣೆ ಪುನಃ ಪ್ರಾರಂಭವಾಗಿದೆ. ನೀರನ್ನು ಮಿತವಾಗಿ ಬಳಸಿ ಉಳಿಸೋಣ. ಪ್ರಾಣಿ ಪಕ್ಷಿ ಸಂಕುಲಕ್ಕೂ ಅದರ ಅವಶ್ಯಕತೆ ಇದೆ. ಮನೆಯ ಛಾವಣಿಯ ಮೇಲೆ ಸ್ವಲ್ಪ ನೀರು ಇಟ್ಟಲ್ಲಿ ಅನೇಕ ಪಕ್ಷಿಗಳು ಜೀವಂತ ಉಳಿಯಬಲ್ಲವು. ನೀರು ಉಣಿಸಿ, ಜೀವ ಉಳಿಸಿ, ಜೀವ ವೈವಧ್ಯತೆ ಕಾಪಾಡಿ. ಜೊತೆಯಾಗಿ ಸರ್ವತೋಮುಖ ಅಭಿವೃದ್ಧಿಗೆ ಪಣತೊಡೋಣ.

ನಿಮ್ಮೆಲ್ಲರಿಗೂ ಯುಗಾದಿಯ ಮತ್ತು ಈಸ್ಟರ್ ಹಬ್ಬದ ಶುಭಾಶಯಗಳು!

ಇಂತಿ ಶುಭಾಶಯಗೊಳೊಂದಿಗೆ.

**ವಂ. ಸ್ವಾಮಿ ಸೆಬಾಸ್ಟಿನ್ ಫೆರ್ನಾಂಡಿಸ್**
ಸಹ ನಿರ್ದೇಶಕರು, ಕ್ರಾಸ್ ಸಂಸ್ಥೆ.

# ಭೂ ಒಡೆಯನ್ಯಾರು?

## ಭೂ ಹಕ್ಕುಗಳ ತಿಳಿವಳಿಕೆ

ಶ್ರೀ ಜಿ.ಯಂ. ವರ್ಗೀಶ್

ಜಗತ್ತಿನಾದ್ಯಂತ ಇರುವ ಕುಟುಂಬಗಳಿಗೆ ಅತ್ಯಂತ ಅಮೂಲ್ಯವಾದ, ಸ್ಪರ್ಶಿಸಬಹುದಾದ ಆಸ್ತಿ ಎಂದರೆ ಭೂಮಿಯಾಗಿದೆ. ಕುಟುಂಬಗಳು ಭೂಮಿಯನ್ನು ಹೊಂದಿ ಸಂತೋಷಪಟ್ಟು ಅದನ್ನು ತಮ್ಮ ಮುಂದಿನ ಜನಾಂಗಕ್ಕೆ ವರ್ಗಾಯಿಸಿ ಸಂರಕ್ಷಣೆಯೊಂದಿಗೆ ಸುಸ್ಥಿರತೆಯನ್ನು ಒದಗಿಸುತ್ತವೆ. ಹಾಗಿದ್ದರೂ ಭಾರತದಲ್ಲಿ ಕೆಲವು ಗೊಂದಲ ಮತ್ತು ಸಂಕೀರ್ಣವಾಗಿರುವ ಸಾಮಾಜಿಕ ಕಾರಣಗಳು ಅವುಗಳನ್ನು ಋಣಭಾರ ಮತ್ತು ಭೂರಹಿತರನ್ನಾಗಿ ಮಾಡುತ್ತಿವೆ. ಪ್ರಪಂಚದ ಇತರೆ ಭಾಗಗಳಲ್ಲಿ ಇರುವಂತೆ ಭಾರತದಲ್ಲಿ ಗ್ರಾಮೀಣ ಬಡತನಕ್ಕೆ ಮೂಲ ಕಾರಣವೆಂದರೆ ಭೂಮಿಯ ನಿಯಂತ್ರಣ ಮತ್ತು ಭೂಮಿಯ ಬಳಕೆ.

ಸ್ವತಂತ್ರ ಭಾರತದಲ್ಲಿ ಭೂ ಶಾಸನವು ವಸಾಹತು ಶಾಹಿ ಆಳ್ವಿಕೆಯಲ್ಲಿದ್ದ ಭ್ರಷ್ಟ ಮತ್ತು ಶೋಷಣೆಯ ಭೂ ಕಂದಾಯ ಪದ್ಧತಿಯನ್ನು ಸುಧಾರಿಸುವ ಉದ್ದೇಶ ಹೊಂದಿತ್ತು. ವಸಾಹತು ಶಾಹಿ ಆಳ್ವಿಕೆಯಲ್ಲಿ ಶೋಷಣೆಗೆ ಒಳಗಾಗಿದ್ದ ಗ್ರಾಮೀಣ ಬಡವರ ಸ್ಥಾನಮಾನವನ್ನು ಉತ್ತಮಗೊಳಿಸಲು ಕೃಷಿ ಅಭಿವೃದ್ಧಿಯನ್ನು ಹೆಬ್ಬಾಗಿಲು ಎಂದು ಪರಿಗಣಿಸಲಾಯಿತು. ಗೇಣಿದಾರರಿಗೆ ಭೂ ಒಡೆತನದ ಹಕ್ಕನ್ನು ನೀಡಲು ಸರ್ಕಾರಕ್ಕೆ ಮಧ್ಯವರ್ತಿಗಳನ್ನು ನಿರ್ಮೂಲನೆ ಮಾಡುವ ಮತ್ತು ಗೇಣಿದಾರರ ಹಿಡುವಳಿ ಭದ್ರತೆಯನ್ನು ನಿರ್ದಿಷ್ಟಗೊಳಿಸುವ ಮನವರಿಕೆಯಾಯಿತು. ಭೂರಹಿತ ಬಡವರು ಮತ್ತು ಭೂಮಿ ಹೊಂದಿರುವ ಶ್ರೀಮಂತರ ನಡುವಿನ ಅಂತರವನ್ನು ತಗ್ಗಿಸುವ ಉದ್ದೇಶದೊಂದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 1947ರ ನಂತರ ಅನೇಕ ಭೂ ಸುಧಾರಣಾ ನೀತಿ ನಿಯಮಗಳನ್ನು ಸಾರಿದವು. "ಉಳುವವನೆ ಭೂ ಒಡೆಯ" ಎಂಬ ಅಂತಿಮ ಉದ್ದೇಶದೊಂದಿಗೆ ಈ ಪ್ರಗತಿಪರ ಭೂ ಸುಧಾರಣಾ ನೀತಿಗಳು ಭೂ ಹಿಡುವಳಿಗಳ ಮೇಲೆ ಗರಿಷ್ಠ ಮಿತಿ ಹೇರಿಕೆಯ ಕ್ರಮವನ್ನು ಪರಿಚಯಿಸುವ ಮೂಲಕ ದೊರೆಯುವ ಭೂಮಿಯನ್ನು ಮರುಹೂಡಿಕೆ ಮಾಡುವ ಕಡೆಗೆ ಗಮನವನ್ನು ಕೇಂದ್ರೀಕರಿಸಿದವು. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನದಲ್ಲಿ ಸರಿಯಾದ ಮತ್ತು ಪರಿಣಾಮಕಾರಿ ಭೂ ಬಳಕೆಯ ಉದ್ದೇಶವು ಕೂಡ ಈ ಭೂ ಸುಧಾರಣಾ ನೀತಿಗಿದೆ.

ಭೂ ಹಕ್ಕುಗಳನ್ನು ಪರಿಚಯಿಸಿ ಆ ಮೂಲಕ ಮುಖ್ಯವಾಹಿನಿಯಿಂದ ದೂರ ಸರಿಸಲ್ಪಟ್ಟ ಜನಸಮುದಾಯಕ್ಕೆ ಜೀವನಾಧಾರ ಒದಗಿಸಿಕೊಡಲು ಅನೇಕ ರಾಜ್ಯ ಸರಕಾರಗಳು ಪ್ರಾಮಾಣಿಕವಾಗಿ ಪ್ರಯತ್ನಿಸಿದವು. ಈ ರೀತಿಯ ಪ್ರಯತ್ನಗಳಲ್ಲಿ ಒಡಿಶಾ , ಕರ್ನಾಟಕ, ಕೇರಳ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳು ಮುಂಚೂಣಿಯಲ್ಲಿ ನಿಲ್ಲುತ್ತವೆ. ಒಡಿಶಾ ಸರ್ಕಾರವು ಅನೇಕ ಪ್ರಗತಿಪರ ಶಾಸನಗಳನ್ನು ಜಾರಿಗೊಳಿಸುವ ಮೂಲಕ ಭೂರಹಿತರಿಗೆ ಭೂಮಿಯನ್ನು ಮತ್ತು ಭೂ ಹಿಡುವಳಿ ಹಕ್ಕನ್ನು ಒದಗಿಸುವಲ್ಲಿ ತನ್ನ ಬದ್ಧತೆಯನ್ನು ತೋರಿಸಿತು. ಈ ಶಾಸನಗಳು, ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕುಟುಂಬಗಳಿಗೆ ಗರಿಷ್ಠ ಭೂ ಹಿಡುವಳಿಗಳನ್ನು ನಿಗದಿಗೊಳಿಸುವ ಮೂಲಕ ಭೂ ಮರುಹಂಚಿಕೆಯನ್ನು ಮಾಡಿದವು. ಪರಿಶಿಷ್ಟ ಪಂಗಡಗಳ ಭೂ ಹಕ್ಕನ್ನು ಪರಿಶಿಷ್ಟ ಪಂಗಡಗಳಲ್ಲದವರಿಂದ ರಕ್ಷಿಸಲು ರಾಜ್ಯ ಸರ್ಕಾರ ಬಲಿಷ್ಠ ಶಾಸನದ ಸಾಧನಗಳನ್ನು ಪರಿಚಯಿಸಿತು. ಅದಾಗ್ಯೂ ಜಾರಿಗೊಳಿಸುವಲ್ಲಿನ ಕೆಲವು ತೊಡರುಗಳಿಂದ ಈ ಕ್ರಮಗಳ ಯಶಸ್ಸು ಮಿತಿಗೊಳಪಟ್ಟಿದೆ. ಇದು ಭೂರಹಿತರು ಹಕ್ಕು ಪತ್ರವಿಲ್ಲದೇ ಸರ್ಕಾರದ ಭೂಮಿಯನ್ನು ಆಕ್ರಮಿಸಿಕೊಳ್ಳಲು ಕಾರಣವಾಗಿದೆ. ಮತ್ತೆ ಮತ್ತೆ ಗ್ರಾಮೀಣ ಕುಟುಂಬಗಳು ತಮ್ಮದಲ್ಲದ ಸರ್ಕಾರಿ ಭೂಮಿಯನ್ನು ಹಕ್ಕುಪತ್ರವಿಲ್ಲದೇ ಹಿಡಿದುಕೊಂಡಿರುವ ಮತ್ತು ಸರ್ಕಾರವೇ ನೀಡಿದ್ದ ಭೂಮಿಯ ಹಿಡುವಳಿಯನ್ನು ಉಳಿಸಿಕೊಂಡಿಲ್ಲದಿರುವ ಸಮಸ್ಯೆಗಳನ್ನು ಎದುರಿಸುತ್ತಿವೆ.

ಸ್ಥಳೀಯ ಅಭಿವೃದ್ಧಿ ಪಾತ್ರದಾರಿಗಳು ಮತ್ತು ನಾಗರೀಕ ಸಮಾಜವು ಭೂ ಆಳ್ವಿಕೆಯ ಸುತ್ತ ಇರುವ ತಾಂತ್ರಿಕ ಮತ್ತು ಕ್ಲಿಷ್ಟತೆಗಳನ್ನು ತಿಳಿಗೊಳಿಸಿ ಈ ಕಾರ್ಯಕ್ರಮವನ್ನು ಜನಸ್ನೇಹಿಯನ್ನಾಗಿಸಿ ಪತಿ–ಪತ್ನಿಯ ಹೆಸರಿನಲ್ಲಿ ಭೂಹಂಚಿಕೆಯಿಂದ ದೊರೆತ ಭೂಮಿಯನ್ನು ಕ್ರಯ ಮಾಡಿಸುವ ಮೂಲಕ ಭೂ ಹಂಚಿಕೆಯ ಕಾರ್ಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿದೆ. ಅಸಂಖ್ಯ ಮಹಿಳೆಯರು ತಮ್ಮ ಹೆಸರಿನಲ್ಲಿ ಭೂಮಿಯ ಪಟ್ಟವನ್ನು ಪಡೆದಾಗ ಸಂತೋಷಪಟ್ಟಿದ್ದಾರೆ, ಏಕೆಂದರೆ ಹಿಂದೆಂದೂ ಅವರು ತಮ್ಮ ಹೆಸರಿನಲ್ಲಿ ಪೋಡಿ ಮತ್ತು ಪಟ್ಟವನ್ನು ಕಂಡಿರಲಿಲ್ಲ ಮತ್ತು ಕೇಳಿರಲಿಲ್ಲ. ಭೂಹಂಚಿಕೆಯ ನಂತರ ಮಹಿಳೆಯರು ಸರ್ಕಾರದ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆಯ ಸಾಮರ್ಥ್ಯ ಮತ್ತು ಆಸಕ್ತಿಯನ್ನು ಹೊಂದಿದ್ದಾರೆ.

**ಅಭಿವೃದ್ಧಿಯ ಹೆಸರಿನಲ್ಲಿ ಭೂ ಸ್ವಾಧೀನ**

ರಾಜ್ಯ ಹಾಗೂ ಕೇಂದ್ರ ಸರಕಾರಗಳು ಅಭಿವೃದ್ಧಿಯ ಹೆಸರಿನಲ್ಲಿ ಭೂ ಸ್ವಾಧೀನ ಕಾಯಿದೆಗಳನ್ನು ತಂದು ರೈತರನ್ನು ಅಭಿವೃದ್ಧಿಯ ಮುಖ್ಯವಾಹಿನಿಯಿಂದ ದೂರಸರಿಸಲಾಗುತ್ತಿದೆ. ದೇಶದ ಜನಸಂಖ್ಯೆಯ ಬಹುದೊಡ್ಡ ಜನವರ್ಗವೆಂದು ಹೇಳಬಹುದಾದ ಕೃಷಿಕ ಸಮಾಜದ ಹಿತರಕ್ಷಣೆಯ ವಿಚಾರ ಮುಖ್ಯವಾಗಿ, ಆಹಾರ ಭದ್ರತೆ ಮತ್ತು ಒದ್ಯೋಗ ಸೃಷ್ಠಿ ಕೃಷಿಯಿಂದಲೇ ಅಧಿಕವಾಗಿದೆ. ಇಂಧನ ಮತ್ತು ರಕ್ಷಣಾ ಭದ್ರತೆಗೆ ಸಂಭಂಧಿಸಿದಂತೆ ದೇಶದ ಬುದ್ಧಿವಂತರೆಲ್ಲ ಕೈಜೋಡಿಸಿದಂತೆ ದೇಶದ ಆಹಾರ ಭದ್ರತೆಯ ಬಗ್ಗೆಯೂ ಇಂತಹದ್ದೆ ಪ್ರಯತ್ನ ನಡೆಯಬೇಕಾಗಿದೆ. ಭವಿಷ್ಯದಲ್ಲಿ ಜನಸಂಖ್ಯೆಯ ಆಹಾರ ಅಗತ್ಯ ಪೂರೈಸಲು ಅಕ್ಕಿ, ರಾಗಿ, ಜೋಳ, ಗೋಧಿ ಮತ್ತಿತರ ಆಹಾರಧಾನ್ಯ, ಹಣ್ಣು ತರಕಾರಿ, ಬೇಳೆಕಾಳು, ತೈಲ, ಬೀಜ ಬೆಳೆಯಲು ಮತ್ತು ಜಾನುವಾರುಗಳಿಗಾಗಿ ಮೇವಿನ ಉತ್ಪಾದನೆಗಾಗಿ ಕೃಷಿಯೋಗ್ಯ ಭೂಮಿಯನ್ನು ಕಾಯ್ದುಕೊಳ್ಳುವ ಬಗ್ಗೆ ನೀಲ ನಕ್ಷೆಯೊಂದನ್ನು ರೂಪಿಸುವ ಅಗತ್ಯ ಇದೆ. ಪೌಷ್ಟಿಕ ಆಹಾರ ಲಭ್ಯತೆ ಮೂಲಕ ದೇಶದ ಜನರ ಆರೋಗ್ಯ ಮತ್ತು ಕೃಷಿ ಚಟುವಟಿಕೆಯನ್ನು ಕೈ ಬಿಡುವುದನ್ನು ತಡೆಯುವುದು ಇಲ್ಲಿ ಮುಖ್ಯವಾಗುತ್ತದೆ. ದೇಶದ ಜನರಿಗೆ ಬೇಕಾಗುವಷ್ಟು ಆಹಾರ ಧಾನ್ಯ ಉತ್ಪಾದನೆಗೆ ಅಗತ್ಯ ಇರುವ ಕೃಷಿ ಯೋಗ್ಯ ಭೂಮಿಯ ಲಭ್ಯತೆಯ ಬಗ್ಗೆ ಸಂಶೋಧನಾ ವರದಿ ಆಧರಿಸಿ ಅಂತಿಮ ನಿರ್ಧಾರಕ್ಕೆ ಬರಬೇಕಾಗುತ್ತದೆ. ಸಾರ್ವಜನಿಕ ಉದ್ದೇಶಗಳಿಗಾಗಿ ಭೂಮಿಯನ್ನು ವಶಪಡಿಸಿಕೊಳ್ಳುವ ವಿಚಾರಕ್ಕೆ ಸಂಭಂದಿಸಿದ ಮಸೂದೆ ಇದಾಗಿದೆ. ಒಂದೆಡೆ ಹಸಿರುಕ್ರಾಂತಿ, ಆಹಾರ ಭದ್ರತೆ, ಹಸಿವಿನ ವಿರುದ್ಧ ಹೋರಾಟ ಎಂದು ಮುಂತಾದ ಘೋಷಣೆಗಳ ಮೂಲಕ ಜನರನ್ನು ತಪ್ಪುದಾರಿಗೆಳೆಯಲಾಗುತ್ತಿದೆ. ಅಭಿವೃದ್ಧಿಯ ನೆಪದಲ್ಲಿ ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ರೈತರಲ್ಲಿ ಅಷ್ಟಿಷ್ಟೋ ಉಳಿದಿರುವ ಕೃಷಿ ಭೂಮಿಯನ್ನು ಬಲಾತ್ಕಾರವಾಗಿ ಕಸಿದುಕೊಂಡು ಶ್ರೀಮಂತ ಉದ್ದಿಮೆದಾರರಿಗೆ ಮತ್ತು ಭೂ ಮಾಫಿಯಾದವರಿಗೆ ಮೃಷ್ಟಾನ್ನ ಭೋಜನವನ್ನು ಉಣಬಡಿಸಬಾರದು. ಇದು ರೈತರ ಪಾಲಿಗೆ ಶಾಪ ಮತ್ತು ಕೈಗಾರಿಕೋದ್ಯಮಿಗಳಿಗೆ ವರದಾನವಾಗಬಾರದು.

ಹಾಗಾದರೆ ಭೂ ಸ್ವಾಧೀನ ಸುಗ್ರೀವಾಜ್ಞೆಯ ಒಳಗೇನಿದೆ?

ಸದರಿ ಭೂ ಸ್ವಾಧೀನ ಸುಗ್ರೀವಾಜ್ಞೆಯು ಬಹು ಚರ್ಚಿತ ವಿಷಯವಾಗಿದ್ದು, ಈ ಎಲ್ಲ ಚರ್ಚೆ ಮತ್ತು ವಿವಾದಗಳು ರೈತನ ಬದುಕಿನ ಸುತ್ತಲೇ ಕೇಂದ್ರೀಕೃತಗೊಂಡಿದೆ. ಭೂ ಸ್ವಾಧೀನ ಸುಗ್ರೀವಾಜ್ಞೆಯು ಲೋಕ ಸಭೆಯ ಒಳಗೂ ಹೊರಗೂ ವಿವಿಧ ಹೋರಾಟದ ಸ್ವರೂಪವನ್ನು ಪಡೆಯುತ್ತಿದೆ.

ಭಾರತದಲ್ಲಿ ಜಾರಿಯಲ್ಲಿರುವ ಹಲವಾರು ಕಾನೂನುಗಳು ಬ್ರಿಟಿಷ್ ಕಾನೂನುಗಳೇ. ಭೂ ಸ್ವಾಧೀನ ಕಾಯ್ದೆಯು ಅಂತಹುದ್ದೇ ಒಂದು ಕಾಯಿದೆಯಾಗಿದೆ. 1894 ರಲ್ಲಿ ಬ್ರಿಟಿಷರು ತಂದಿದ್ದ ಈ ಕಾಯ್ದೆಯು ಸರಕಾರಕ್ಕೆ ಜಿಲ್ಲಾಧಿಕಾರಿಗಳ ಮೂಲಕ ಹೊರಡಿಸುವ ಭೂ ಸ್ವಾಧೀನ ಆದೇಶದನ್ವಯ ಅಪರಿಮಿತ ಅಧಿಕಾರವನ್ನು ತರುತ್ತಿತ್ತು. ಜನರು ತಮಗೆ ಸಿಗಬೇಕಾದ ಪರಿಹಾರಕ್ಕಾಗಿ ನ್ಯಾಯಾಲಯಕ್ಕೆ ಹೋಗಬಹುದಿತ್ತು. ಆದರೂ ಸರಕಾರದ ಪರಮಾಧಿಕಾರವೇ ಮೇಲುಗೈ ಸಾಧಿಸುತ್ತಿತ್ತು. ಇದರನ್ವಯ ನಡೆಯುತ್ತಿರುವ ಭೂ ಸ್ವಾಧೀನವು ಜನರ ಬದುಕನ್ನು ಕಿತ್ತುಕೊಳ್ಳುತ್ತಿದೆ. ಹೀಗಾಗಿ ದಿನೇ ದಿನೇ ಭೂ ಸ್ವಾಧೀನ ಹೋರಾಟಗಳು ಹೆಚ್ಚುತ್ತಲೇ ಇವೆ. ಉದಾ: ನರ್ಮದಾ ಅಣೆಕಟ್ಟು ವಿರೋಧಿ ಚಳವಳಿ.

**ಭೂ ಸ್ವಾಧೀನ ಕಾಯ್ದೆಯ ಹಿನ್ನೆಲೆ:**

- ಭೂ ಸ್ವಾಧೀನ, ಪುನರ್ವಸತಿ ಮತ್ತು ಪರಿಹಾರದಲ್ಲಿ ಪಾರದರ್ಶಕತೆ ಮತ್ತು ನ್ಯಾಯತ ಪರಿಹಾರವನ್ನು ಪಡೆದುಕೊಳ್ಳುವ ಹಕ್ಕು ಕಾಯ್ದೆ 2013, ಅನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು. ಈ ಕಾಯಿದೆಯು ಒಂದಷ್ಟು ಜನಪರ ಕಾಳಜಿ ಹೊಂದಿ, ಪ್ರಜಾತಾಂತ್ರಿಕ ಆಶೋತ್ತರಗಳಿಗೆ ಒತ್ತು ನೀಡಿ, ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ಕೊಡಲಾಯಿತು. ಈ ಕಾಯಿದೆಯಲ್ಲಿ ಭೂಮಿಯನ್ನು ಕಳೆದುಕೊಳ್ಳುವ ರೈತರ ಹಕ್ಕನ್ನು ಎತ್ತಿ ಹಿಡಿವ ವಿಚಾರಗಳು ಇದ್ದವು. 1894ರ ಕಾಯ್ದೆಗೆ ಹೋಲಿಸಿದರೆ ಈ ಕಾಯಿದೆಯು ಭಾರೀ ಜನಪರ ಕಾಳಜಿ ಹೊಂದಿದ್ದುದು ನಿಜ. ಶೇ.70 ( ಸರ್ಕಾರೀ ಯೋಜನೆಗಳಿಗೆ) ಮತ್ತು ಶೇ.80(ಖಾಸಗಿ ಯೋಜನೆಗಳಿಗೆ)ರಷ್ಟು ಭೂ ಸಂತ್ರಸ್ತರ ಒಪ್ಪಿಗೆ ಇಲ್ಲದೆ ಭೂ ಸ್ವಾಧೀನ ಮಾಡಿಕೊಳ್ಳಲು ಅವಕಾಶ ಇದ್ದಿಲ್ಲ. ಶೇಕಡ 5 ಕ್ಕಿಂತ ಹೆಚ್ಚು ಬಹು ಬೆಳೆ ಬೆಳೆಯುವ ಜಮೀನನ್ನು ವಶಪಡಿಸಿಕೊಳ್ಳುವಂತಿಲ್ಲ. ಮಾರುಕಟ್ಟೆ ಬೆಲೆಗಿಂತ 4 ಪಟ್ಟು ಹೆಚ್ಚುದರ ಕೊಡಲೇ ಬೇಕು ಇತ್ಯಾದಿ ಅಂಶಗಳು ಈ ಕಾಯಿದೆಯಲ್ಲಿ ಇದ್ದವು. ಇಂತಹ ಕಾಯಿದೆ ಉತ್ತಮ ರೈತಪರ ಜನಪ್ರತಿನಿಧಿಗಳ ಪಕ್ಷಾತೀತ ಹೋರಾಟದಿಂದ ಸಾಧ್ಯವಾಗಿತ್ತು. ಆದರೆ ಇದನ್ನು ಪುನಃ ತಿದ್ದುಪಡಿಗೆ ಒಳಪಡಿಸಲಾಗಿದೆ
- ಹಿಂದಿನ ಭೂ ಸ್ವಾಧೀನ ಕಾಯ್ದೆಯಲ್ಲಿ ಸಾಮಾಜಿಕ ಸಮಗ್ರ ಪರಿಣಾಮಗಳ ಅಧ್ಯಯನದ ವರದಿ ಕಡ್ಡಾಯವಾಗಿತ್ತು. ಆದರೆ ಪ್ರಸ್ತುತ ರಕ್ಷಣೆ, ಭದ್ರತೆ, ಮೂಲ ಸೌಕರ್ಯ, ಕೈಗಾರಿಕ ಕಾರಿಡಾರ್, ಸಾಮಾಜಿಕ ಮೂಲ ಸೌಕರ್ಯ ಮತ್ತು ಸಾರ್ವಜನಿಕ – ಖಾಸಗಿ ಸಹಭಾಗಿತ್ವದ ಮಾದರಿ ಯೋಜನೆಗಳಿಗೆ ಖಡ್ಡಾಯ ಅಗತ್ಯವಿಲ್ಲ.
- ಹಿಂದೆ ಭೂ ಸ್ವಾಧೀನ ಕಾಯ್ದೆಯಲ್ಲಿ ಪರಿಸರದ ಮೇಲೆ ಆಗುವ ಪರಿಣಾಮದ ವರದಿ ಕಡ್ಡಾಯವಾಗಿತ್ತು. ಆದರೆ ಪ್ರಸ್ತುತ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನುಗಳಿಗೆ ಮಾತ್ರ ಈ ವರದಿ ಅವಶ್ಯಕತೆ.
- ಹಿಂದಿನ ಭೂ ಸ್ವಾಧೀನ ಕಾಯ್ದೆಯಲ್ಲಿ ನುರಿತ ತಜ್ಞರ ತಂಡದ ವರದಿ ಕಡ್ಡಯವಾಗಿತ್ತು. ಪ್ರಸ್ತುತ ಪ್ರಸ್ತಾವಿತ ಕಾಯಿದೆಯಲ್ಲಿ ಈ ವರದಿಯೇ ಬೇಕಾಗಿಲ್ಲ.
- 2013 ರ ಭೂ ಸ್ವಾಧೀನ ಕಾಯ್ದೆಯಲ್ಲಿ ಜಿಲ್ಲಾಧಿಕಾರಿಗಳ ಸಮಗ್ರ ವರದಿ ಬೇಕಾಗಿತ್ತು. ಪ್ರಸ್ತುತ ಪ್ರಸ್ತಾವಿತ ಮಸೂದೆಯಲ್ಲಿ ಈ ವರದಿ ಕಡ್ಡಾಯವಿಲ್ಲ ಎನ್ನಲಾಗಿದೆ.
- ಈ ಹಿಂದಿನ ಭೂ ಸ್ವಾಧೀನ ಕಾಯ್ದೆಯಲ್ಲಿ ಸಾರ್ವಜನಿಕ ಆಕ್ಷೇಪಣೆಗಳಿಗೆ ಅವಕಾಶ ನೀಡಿ, ಅವುಗಳನ್ನು ಪರಿಗಣಿಸಬೇಕಾಗಿತ್ತು. ಆದರೆ ತಿದ್ದುಪಡಿ ಮಸೂದೆಯಲ್ಲಿ ಇದಕ್ಕೆ ಅವಕಾಶ ನೀಡಲಾಗಿಲ್ಲ.
- ಹಿಂದಿನ ಭೂ ಸ್ವಾಧೀನ ಕಾಯ್ದೆಯಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳುವಾಗ, ಪ್ರಾಥಮಿಕ ಅಧಿಸೂಚನೆ, ಅಂತಿಮ ಅಧಿಸೂಚನೆಗಳ ನಂತರ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಬೇಕಿತ್ತು. ಪ್ರಸ್ತಾವಿತ ಮಸೂದೆಯಲ್ಲಿ ಭೂ ಸ್ವಾಧೀನ ಅಧಿಸೂಚನೆಯ 30 ದಿನದೊಳಗೆ ಭೂಮಿಯನ್ನು ವಶಪಡಿಸಿಕೊಳ್ಳಬಹುದು.
- ಹಿಂದಿನ ಭೂ ಸ್ವಾಧೀನ ಕಾಯ್ದೆಯಲ್ಲಿ, ಭೂ ಸ್ವಾಧೀನ ಪಡಿಸಿಕೊಳ್ಳುವಾಗ, ಸಾರ್ವಜನಿಕರ ಆಕ್ಷೇಪಣೆಗಳಿಗಾಗಿ, ಪತ್ರಿಕೆಗಳಲ್ಲಿ, ವೆಬ್‌ಸೈಟುಗಳಲ್ಲಿ ಮತ್ತು ನೋಟೀಸು ಬೋರ್ಡುಗಳಲ್ಲಿ ಪ್ರಕಟಿಸಬೇಕು. ಆದರೆ ಪ್ರಸ್ತುತ ಮಸೂದೆಯಲ್ಲಿ ಈ ಯಾವ ನಿರ್ಬಂಧವೂ ಇಲ್ಲ.
- ಹಳೆಯ ಭೂ ಸ್ವಾಧೀನ ಕಾಯ್ದೆಯಲ್ಲಿ, ಭೂ ಸ್ವಾಧೀನ ಪಡಿಸಿಕೊಳ್ಳುವಾಗ, ಅಧಿಕೃತವಾಗಿ ಗೆಜೆಟ್ಟಿನಲ್ಲಿ ಪ್ರಕಟಿಸುವ ಮುಂಚೆ ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಸಭೆಗಳ ಅನುಮತಿ ಪಡೆಯಬೇಕಿತ್ತು. ಈ ಯಾವ ನಿರ್ಬಂಧವೂ ಇಲ್ಲ ಹೊಸ ಕಾಯಿದೆಯಲ್ಲಿ.
- ಹಿಂದಿನ ಭೂ ಸ್ವಾಧೀನ ಕಾಯ್ದೆಯಲ್ಲಿ, ಭೂಮಿಯನ್ನೇ ನೆಚ್ಚಿಕೊಂಡು ಬದುಕುವವರಿಗೆ, ಕುಟುಂಬದಲ್ಲಿ ಒಬ್ಬರಿಗೆ ಭೂಮಿ ಪಡೆದ ಉದ್ದಿಮೆ ಸಂಸ್ಥೆಯಲ್ಲಿ ಕೆಲಸ ನೀಡಬೇಕು ಎಂದಿತ್ತು. ಹೊಸ ಕಾಯಿದೆಯಲ್ಲಿ ಇದಕ್ಕೆ ಅವಕಾಶವಿಲ್ಲ ಹಾಗೂ ಭೂ ಸ್ವಾಧೀನ ಕಾಯ್ದೆಯಲ್ಲಿ, ಸಾರ್ವಜನಿಕರ ಆಕ್ಷೇಪಣೆಗಳಿಗಾಗಿ ಬಹಿರಂಗ ಸಭೆಗಳನ್ನು ಆಯೋಜಿಸಿ ಮುಕ್ತ ಚರ್ಚೆಗೆ ಅವಕಾಶ ಇತ್ತು. ಹೊಸ ಕಾಯಿದೆಗೆ ಇದು ಅನ್ವಯಿಸುವುದಿಲ್ಲ.

ಅಭಿವೃದ್ಧಿ ಹೆಸರಿನಲ್ಲಿ ಲಕ್ಷಾಂತರ ರೈತರು ಮತ್ತು ಆದಿವಾಸಿಗಳ ಬದುಕಿನಮೇಲೆ ಆಗಲಿರುವ ಪರಿಣಾಮಗಳು ಭವಿಷ್ಯದಲ್ಲಿ ಇನ್ನಷ್ಟು ಸಮಸ್ಯೆಗಳಿಗೆ ಎಡೆಮಾಡಿಕೊಡಲಿವೆ. ಭೂ ಮಸೂದೆ ಜತೆಗೆ ಆಹಾರ ಭದ್ರತೆ ವಿಷಯವೂ ತಳುಕು ಹಾಕಿಕೊಂಡಿದೆ. ರೈತರ ಭೂಮಿ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ರೈತರ ಒಪ್ಪಿಗೆ ಪಡೆಯುವ, ಅವರಿಗೆ ನೀಡುವ ಪರಿಹಾರದ ಮೊತ್ತ, ಪರಿಸರದ ಮೇಲಾಗುವ ಪರಿಣಾಮಗಳ ಅಧ್ಯಯನ ಮುಂತಾದವು ಒಂದೊಕ್ಕೊಂದು ಸಂಬಂಧ ಹೊಂದಿವೆ. ಕೃಷಿ ಯೋಗ್ಯ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಬಳಸುವುದನ್ನು ತಡೆಯಲು ಸೂಕ್ತ ಕಾಯಿದೆಯನ್ನು ರೂಪಿಸಬೇಕಾಗಿದೆ. ರೈತ ಮುಖಂಡರು, ಜನಪ್ರತಿನಿಧಿಗಳು ಅನ್ನ ನೀಡುವ ರೈತನ ಜೀವನವನ್ನು ಬಲಪಡಿಸಬೇಕಿದೆ.

# ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

## ಸಾಂಪ್ರಾದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿ ಕಸುಬುದಾರರಿಗೆ ಸಾಲ ಮತ್ತು ಸಹಾಯಧನ

ಶ್ರೀ ಜಿ.ಯು. ವರ್ಗೀಸ್

1. ಸಾಂಪ್ರಾದಾಯಿಕ ವೃತ್ತಿ ಮತ್ತು ಕುಶಲಕರ್ಮಿಗಳಿಗೆ ಅವರ ವೃತ್ತಿ ಕೌಶಲ್ಯತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ರೂ.5,000/–ಗಳ ಸಹಾಯಧನ ಹಾಗೂ ರೂ.45,000/–ಗಳ ಸಾಲವನ್ನು ವಾರ್ಷಿಕ ಶೇ.4 ರ ಬಡ್ಡಿದರದಲ್ಲಿ ಮಂಜೂರು ಮಾಡುವುದು.
2. ಈ ಕಾರ್ಯಕ್ರಮದಲ್ಲಿ ರೂ. 45,000/– ಗಳಿಂತ ಹೆಚ್ಚಿನ ಸಾಲದ ಮೊತ್ತ ಕೋರಿದಲ್ಲಿ ಅಂತಹ ಫಲಾನುಭವಿಗಳಿಗೆ ಬ್ಯಾಂಕ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿರುವ ಚೈತನ್ಯ ಸಬ್ಸಿಡಿ ಮತ್ತು ಕಿರು ಸಾಲ ಯೋಜನೆಯಲ್ಲಿ ಸೌಲಭ್ಯ ಒದಗಿಸಲಾಗುತ್ತದೆ.

**ಅರ್ಹತೆ:**

1. ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ) ಹಾಗೂ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/–ಗಳು ಪಟ್ಟಣ ಪ್ರದೇಶದವರಿಗೆ ರೂ.55,000/–ಗಳ ಒಳಗಿರಬೇಕು.
2. ಸಾಂಪ್ರಾದಾಯಿಕ ವೃತ್ತಿಗಳಲ್ಲಿ ಗುರುತಿಸಿರುವ 47 ವೃತ್ತಿಗಳಾದ ಬಡಗಿ ಕೆಲಸ, ಮರದ ಕೆತ್ತನೆ ಕೆಲಸ, ಉಣ್ಣೆ ಮತ್ತು ಕಂಬಳಿ ನೇಯ್ಗೆ, ಅಡಿಕೆ ಹಾಳೆಯಿಂದ ತಟ್ಟೆ ತಯಾರಿಕೆ ಕುಂಬಾರಿಕೆ/ಕಲಾತ್ಮಕ ಮಡಿಕೆ ತಯಾರಿಕೆ, ಟೈಲರಿಂಗ್, ಹತ್ತಿ ನೇಯ್ಗೆ/ನೇಕಾರಿಕೆ, ಟಿನ್ ವಸ್ತುಗಳ ತಯಾರಿಕೆ, ಜೇನು ಸಾಕಾಣಿಕೆ, ನಿಟ್ಟಿಂಗ್ ಕೆಲಸ, ಉಣ್ಣೆ ನೇಯ್ಗೆ ಮತ್ತು ಹಾಸು ಕಂಬಳಿ ತಯಾರಿಕೆ, ಚರ್ಮದ ವಸ್ತುಗಳ ತಯಾರಿಕೆ, ಗಾಣದ ಕೆಲಸ, ಸಿಲ್ಕ್ ರೀಲಿಂಗ್ ಮತ್ತು ಸಿಲ್ಕ್ ಟ್ವಿಸ್ಟಿಂಗ್ ಕೆಲಸ, ಅಗರಬತ್ತಿ ತಯಾರಿಕೆ, ಮೆಷನರಿ ವರ್ಕ್ಸ್, ಪೊರಕೆ ಕಡ್ಡಿ ತಯಾರಿಕೆ, ಕಾಯರ್ ಫೈಬರ್ ತಯಾರಿಕೆ, ಹೂ ಕಟ್ಟುವ ವೃತ್ತಿ, ಬಿದರಿ ವೇರ್ ಕೆಲಸ, ವಿಗ್ರಹ/ಕಲ್ಲು ಕೆತ್ತನೆ ಕೆಲಸಗಳು. ಪಾತ್ರೆಗಳಿಗೆ ಕಲಾಯಿ, ಕ್ಷೌರಿಕ ವೃತ್ತಿ/ಸೆಲೂನ್, ಮೀನುಗಾರಿಕೆ, ವಾದ್ಯ ವೃಂದ ವೃತ್ತಿ, ವಾಲಗ ಊದುವುದು, ನಾಟಿ ಔಷಧಿ, ಗೌಳಿ ವೃತ್ತಿ (ಹೈನುಗಾರಿಕೆ). ದನಗಾಹಿ ವೃತ್ತಿ, ಬಣ್ಣ/ಶೃಂಗಾರ (ಬ್ಯೂಟಿ ಪಾರ್ಲರ್) ಮಾಡುವ ವೃತ್ತಿ, ಬೈಸಿಕಲ್/ ಆಟೋಮೊಬೈಲ್ ರಿಪೇರಿ, ಬಳೆ ವ್ಯಾಪಾರ/ಮೇಣದ ಬತ್ತಿ, ಶೀಟ್ ಮೆಟಲ್ ವೃತ್ತಿ, ವೆಲ್ಡಿಂಗ್ ವರ್ಕ್ಸ್, ಚಿನ್ನಬೆಳ್ಳಿ ಕೆಲಸ, ಬಣ್ಣಗಾರಿಕೆ ಮತ್ತು ಮುದ್ರಣಕಾರಿಕೆ, ಕುರಿ ಸಾಕಾಣಿಕೆ, ಕಂಚು ಕೆಲಸ, ಮ್ಯಾಟ್ ತಯಾರಿಕೆ, ನಾರಿನಿಂದ ವಿವಿಧ ಉತ್ಪನ್ನ ತಯಾರಿಕೆ, ಗಾಡಿ/ರಥ ತಯಾರಿಕೆ, ಕಮ್ಮಾರಿಕೆ/ಕುಲುವೆ, ಗ್ಲಾಸ್ ಬೀಡ್ಸ್ ತಯಾರಿಕೆ, ಬೆತ್ತದ ಕೆಲಸ(ರಟ್ಟನ್) ಆಟಿಕೆ/ಗೊಂಬೆ ತಯಾರಿಕೆ ಮತ್ತು ಕೆತ್ತನೆ ಕೆಲಸ, ಮೆಟಲ್ ಕ್ರಾಫ್ಟ್ ಕೆಲಸ, ಕುಂಬಾರಿಕೆ ಕಲಾತ್ಮಕ ಉತ್ಪನ್ನಗಳ ತಯಾರಿಕೆ, ನಿಟ್ಟಿಂಗ್ ಕೆಲಸ, ಜೇನು ಸಾಕಾಣಿಕೆ, ಟೈಲರಿಂಗ್, ಹತ್ತಿ ನೇಯ್ಗೆ/ನೇಕಾರಿಕೆ ಚರ್ಮದ ವಸ್ತುಗಳ ತಯಾರಿಕೆ.

ವಿಶೇಷ ಸೂಚನೆ:– ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಸ್ಥಾಪನೆಯಾಗಿರುವುದರಿಂದ ಈ ಮೇಲ್ಕಂಡ ವೃತ್ತಿಗಳಲ್ಲಿ ವಿಶ್ವಕರ್ಮ ಸಮುದಾಯದವರು ಕೈಗೊಳ್ಳುವ ವೃತ್ತಿಗಳಿಗೆ ಹಾಗೂ ಕುಂಬಾರಿಕೆ ಅಭಿವೃದ್ಧಿ ಮಂಡಳಿಯು ಕಾರ್ಯ ನಿರ್ವಹಿಸುತ್ತಿದ್ದು. ಇದರ ವತಿಯಿಂದ ಕುಂಬಾರಿಕೆ ಉದ್ದೇಶಕ್ಕೆ ಪ್ರತ್ಯೇಕವಾಗಿ ಗುರಿ ನಿಗದಿಪಡಿಸಿರುವುದರಿಂದ ಈ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮುದಾಯದವರಿಗೆ ಮತ್ತು ಕುಂಬಾರ ಸಮುದಾಯದವರಿಗೆ ಅವರು ನಿರ್ವಹಿಸುವ ಸಾಂಪ್ರಾದಾಯಿಕ ವೃತ್ತಿಗಳಿಗೆ ಸಾಲ ಸೌಲಭ್ಯ ಒದಗಿಸಲು ಅವಕಾಶವಿರುವುದಿಲ್ಲ.

**ಕಿರುಸಾಲ ಯೋಜನೆ:–**

ಕಿರುಸಾಲ ಯೋಜನೆಯಲ್ಲಿ ಕುಶಲ ಅಕುಶಲ ವ್ಯಕ್ತಿಗಳು ನಗರ, ಪಟ್ಟಣ ಮತ್ತು ಹೋಬಳಿ ಹಂತಗಳಲ್ಲಿ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ ಸಹಾಯ ಗುಂಪುಗಳ ಮೂಲಕ ಸಾಲ ಸೌಲಭ್ಯ ಪಡೆಯಬಹುದಾಗಿದೆ.

- ಸಾಲದ ಉದ್ದೇಶ :– ಸಣ್ಣ ವ್ಯಾಪಾರ ಚಟುವಟಿಕೆಗಳಾದ ಹಣ್ಣು, ತರಕಾರಿ ವ್ಯಾಪಾರ, ಹಾಲು ವ್ಯಾಪಾರ, ಹೂ ವ್ಯಾಪಾರ, ಮೀನು ವ್ಯಾಪಾರ, ಟೀ/ಕಾಫೀ ಸ್ಟಾಲ್, ವ್ಯಾಪಾರ, ಸಣ್ಣ ವ್ಯಾಪಾರ ಇತ್ಯಾದಿ ವ್ಯಾಪಾರದ ಚಟುವಟಿಕೆಗಳಿಗೆ ಗರಿಷ್ಠ ರೂ 15,000/–ಗಳ ಆರ್ಥಿಕ ನೆರವು.
- ಅರ್ಹತೆ: ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು (ವಿಶ್ವಕರ್ಮ ಸಮುದಾಯಗಳನ್ನು ಹೊರತುಪಡಿಸಿ)
- ಸಹಾಯಧನ: ಗರಿಷ್ಠ ರೂ. 5,000/– ಗಳು
- ಸಾಲದ ಮೊತ್ತ: ರೂ. 10,000/– ಗಳು
- ಬಡ್ಡಿದರ: ಸ್ವ ಸಹಾಯ ಸಂಘಗಳು ಸಾಲದ ಮೊತ್ತವನ್ನು ವಾರ್ಷಿಕ ಶೇಕಡ 4ರ ಬಡ್ಡಿದರದೊಂದಿಗೆ ನಿಗಮಕ್ಕೆ ಹಿಂದಿರುಗಿಸಬೇಕಾಗುತ್ತದೆ. ಶೇಕಡ 1ರ ಭಾಗ ಬಡ್ಡಿಯನ್ನು ಹೆಚ್ಚುವರಿಯಾಗಿ ಪಡೆದು ಸ್ವ ಸಹಾಯ ಗುಂಪುಗಳು ಸೇವಾ ಶುಲ್ಕವಾಗಿ ಇಟ್ಟುಕೊಳ್ಳಬಹುದು.
- ಫಲಾನುಭವಿಗಳು ಸಹಾಯ ಗುಂಪುಗಳ ಸದಸ್ಯರಾಗಿರಬೇಕು.
- ಫಲಾನುಭವಿಗಳು ಬಿ.ಪಿ.ಎಲ್ ಕುಟುಂಬಕ್ಕೆ ಸೇರಿರಬೇಕು. ಹಾಗೂ ಸರ್ಕಾರಿ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರಬಾರದು.

**ಮರುಪಾವತಿ:** ಸ್ವ ಸಹಾಯ ಗುಂಪುಗಳು ಸಾಲದ ಮೊತ್ತವನ್ನು 36 ತಿಂಗಳಲ್ಲಿ ತ್ರೈಮಾಸಿಕ ಕಂತುಗಳಲ್ಲಿ ಪ್ರತಿ ವರ್ಷ 30ನೇ ಜೂನ್, 30ನೇ ಸೆಪ್ಟಂಬರ್, 30ನೇ ಡಿಸೆಂಬರ್ ಹಾಗೂ 31ನೇ ಮಾರ್ಚ್‌ನಲ್ಲಿ ಸಾಲ ಮರುಪಾವತಿ ಮಾಡಬೇಕು. ಸುಸ್ತಿಯಾದಲ್ಲಿ ಶೇಕಡ 5ರಷ್ಟು ದಂಡ ಬಡ್ಡಿ ಪಾವತಿಸಬೇಕು.

ಕೃಪೆ: ಡಿ. ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಂತರ್ಜಾಲ

# ಕೃಷಿಯಲ್ಲಿ ಬಹು ಉಪಕಾರಿ ಪರಿಣಾಮಕಾರಿ ಸಾವಯವ ಸೂಕ್ಷ್ಮ ಜೀವಿಗಳು (ಇ. ಎಮ್.)

ಶ್ರೀಮತಿ ಜಾಯ್ಸ್ ಎಮ್ ಪಿರೇರ

ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ಹಲವಾರು ವಿಧದ ಕೃಷಿ ಮಾಡಲಾಗುತ್ತದೆ. ಈ ಎಲ್ಲಾ ಪದ್ಧತಿಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪರಿಣಾಮಕಾರಿ ಸಾವಯವ ಸೂಕ್ಷ್ಮ ಜೀವಿಗಳು (ಇ.ಎಮ್) ಬಳಕೆಯಾಗುತ್ತಿದೆ, ಆದರೆ ಅದಕ್ಕೆ ನಾಮಕರಣ ಮಾಡುವುದಾಗಲ್ಲೀ, ಅದರ ಬಗ್ಗೆ ಹೆಚ್ಚಿನ ಅಭ್ಯಾಸ ಮಾಡುವುದಾಗಲೀ ಮಾಡಲಿಲ್ಲ. ಇ.ಎಮ್. ಎಂದರೆ 'ಎಫೆಕ್ಟಿವ್ ಮೈಕ್ರೋಆರ್ಗ್ಯಾನಿಸಮ್ಸ್' ಕನ್ನಡದಲ್ಲಿ ಪರಿಣಾಮಕಾರಿ ಸೂಕ್ಷ್ಮಾಣು ಜೀವಿಗಳು.

ಹೆಸರೇ ಹೆಳುವಂತೆ ಇದು ಬಹು ಪರಿಣಾಮಕಾರಿ. ಪರಿಸರ ಸಮತೋಲನ ಕಾಪಾಡುವಲ್ಲಿ ವಾತಾವರಣದಲ್ಲಿ ಏರು-ಪೇರಾದಾಗ ಸೂಕ್ಷ್ಮಾಣುಜೀವಿಗಳು ಮಣ್ಣಿನ ಗುಣಧರ್ಮ ಸುಧಾರಿಸುತ್ತವೆ. ಮಣ್ಣಿನಲ್ಲಿ ಸೇರಿದಾಗ ಅವು ಹಿಂದೆಯೇ ಇದ್ದ ಜೀವಾಣುಗಳನ್ನು ಸ್ಥಳಾಂತರಿಸುವುದಿಲ್ಲ. ಸಾರಜನಕ ಸ್ಥಿರೀಕರಿಸುವ, ರಂಜಕವನ್ನು ಕರಗಿಸುವ ಜೀವಾಣುಗಳ ಜೊತೆ ಬೆರೆತು ಸೂಕ್ಷ್ಮಾಣುಗಳ ವೈವಿಧ್ಯತೆ ಹೆಚ್ಚಿಸುತ್ತವೆ. ಇದರಿಂದ ಉಪಕಾರಿ ಜೀವಾಣುಗಳ ಸಂಖ್ಯೆ ವೃದ್ದಿಸುತ್ತದೆ.

ಹಲವು ಪ್ರಕೃತಿಗೆ ಪೂರಕ ಹಾಗೂ ಮಾರಕ ಸೂಕ್ಷ್ಮಾಣು ಜೀವಿಗಳು ಬರಿಗಣ್ಣಿಗೆ ಕಾಣದ ಸ್ಥಿತಿಯಲ್ಲಿವೆ. ಅವುಗಳ ಕಾರ್ಯ ಗಮನಾರ್ಹ. ಕೃಷಿಯಲ್ಲಿ ಬಳಸುವ ಹುಳಿ ಬರಿಸುವ ದ್ರವರೂಪಿ ಗೊಬ್ಬರಗಳಲ್ಲಿ ಈ ಸೂಕ್ಷ್ಮಾಣು ಜೀವಿಗಳಿರುತ್ತವೆ. ಹಾಗೆಯೇ ಮುಚ್ಚಿಗೆಯ (ಮಲ್ಚಿಂಗ್) ಕೆಳಭಾಗದಲ್ಲಿ ಇವುಗಳ ಕ್ರಿಯೆ ನಿರಂತರ. ಸೂಕ್ಷ್ಮಾಣು ಜೀವಿಗಳಿಂದ ಆಹಾರ ಹುದುವಿಕೆಯಾಗುತ್ತದೆ. ಹಾಲು ಮೊಸರಾಗುವ ಕ್ರಿಯೆಗೆ, ತ್ಯಾಜ್ಯಗಳ ಕಳಿಯುವಿಕೆಗೆ ಈ ಸೂಕ್ಷ್ಮಾಣುಗಳ ನೆರವು ಅಗತ್ಯ. ಈ ಕ್ರಿಯೆಯನ್ನು ಫರ್ಮೆಂಟೇಷನ್ ಎಂದು ಕರೆಯುತ್ತಾರೆ. ಗಾಳಿಯಲ್ಲಿ ಇರುವುದಕ್ಕಿಂತ ಹೆಚ್ಚು ಜೀವಾಣುಗಳು ಮಣ್ಣು ಮತ್ತು ನೀರಿನಲ್ಲಿರುವುದು ಕಂಡು ಬಂದಿದೆ. ಇವುಗಳ ಸಂಖ್ಯೆ ಹೆಚ್ಚಿದಷ್ಟೂ ಸಸ್ಯಗಳಲ್ಲಿ ರೋಗ ರುಜಿನ ಕಡಿಮೆಯಾಗುತ್ತದೆ. ಹಾಲು ಮೊಸರಾಗಲು ಸಹಕರಿಸುವ ಬ್ಯಾಕ್ಟಿರಿಯಗಳು, ಇಡ್ಲಿ, ಬ್ರೆಡ್ ಮುಂತಾದವು ಉಬ್ಬಿಕೊಂಡು ಮೆತ್ತಗಾಗಲು ಸಹಕರಿಸುವ ಬ್ಯಾಕ್ಟೀರಿಯಗಳು ನೀರಿನಲ್ಲಿ ತೇಲಾಡುವ ಹೈಸಿಂಥ್ ಸಸ್ಯಗಳಂತಹ ಬೇರುಗಳಲ್ಲಿ ಇರುತ್ತವೆ. ಈ ಸೂಕ್ಷ್ಮಾಣು ಜೀವಿಗಳ ಮಿಶ್ರಣದ ಜೀವಿತಾವಧಿಯನ್ನು ಹೆಚ್ಚಿಸುವ ಪ್ರಯತ್ನಕ್ಕೆ ಮಾಧ್ಯಮವಾಗಿ ವಾಹಕವೊಂದರ ಅಗತ್ಯವಿದ್ದು ಅದನ್ನು ಅಭಿವೃದ್ಧಿಪಡಿಸಿದರು, ಅದನ್ನೇ ಪರಿಣಾಮಕಾರಿ ಸಾವಯವ ಸೂಕ್ಷ್ಮ ಜೀವಿಗಳು (ಇ.ಎಮ್) ಎಂದು ಕರೆಯಲಾಯಿತು.

ಮನೆಯಲ್ಲಿ ಪರಿಣಾಮಕಾರಿ ಸಾವಯವ ಸೂಕ್ಷ್ಮ ಜೀವಿಗಳು (ಇ.ಎಮ್) ತಯಾರಿಸಬಹುದಾದ ವಿಧಾನಗಳು ಹಲವಾರು. ಇದನ್ನು ತಯಾರಿಸಲು ಹೆಚ್ಚಿನ ಹಣ ಖರ್ಚು ಮಾಡುವ ಅವಶ್ಯಕತೆ ಇಲ್ಲ. ದಿನ ನಿತ್ಯ ಉಪಯೋಗಿಸುವ ಪದಾರ್ಥಗಳನ್ನು ಬಳಸಿ ತಯಾರಿಸಬಹುದು. ತಮ್ಮ ಕಲಿಕೆಗಾಗಿ

ಒಂದು ವಿಧಾನವಿಲ್ಲಿದೆ:



ಬೇಕಾಗುವ ಸಾಮಾಗ್ರಿಗಳು: ಮೊಟ್ಟೆ – 25, ನಿಂಬೆಹಣ್ಣು– 50

ಒಂದು ಸ್ಟೀಲ್/ಪ್ಲಾಸ್ಟಿಕ್ ಬಟ್ಟಲು

ನಿಂಬೆಹಣ್ಣಿನ ರಸವನ್ನು ಒಂದು ಸ್ಟೀಲ್/ಪ್ಲಾಸ್ಟಿಕ್ ಬಟ್ಟಲಿಗೆ ಹಿಂಡಿಕೊಳ್ಳಿರಿ. ಆ ರಸದಲ್ಲಿ ಮೊಟ್ಟೆಗಳನ್ನು ನಿಧಾನವಾಗಿ ಇಡಿ. ಮೊಟ್ಟೆ ಬಟ್ಟಲಿನಲ್ಲಿ ಹಾಕಿದಾಗ ನಿಂಬೆಹಣ್ಣಿನ ರಸದ ಮಟ್ಟ ಮೇಲೆ ಬರುತ್ತದೆ. ನಿಂಬೆ ರಸದಲ್ಲಿ ಮೊಟ್ಟೆಗಳು ಮುಳುಗುವಂತಿರಬೇಕು. ಏಳು ದಿನಗಳ ತನಕ ಬಟ್ಟಲಿನ ಬಾಯಿಗೆ ಹತ್ತಿ ಬಟ್ಟೆ ಮುಚ್ಚಿಡಿ. ಏಳು ದಿನಗಳ ನಂತರ ಮೊಟ್ಟೆ ಸಿಪ್ಪೆ ಸಮೇತ ಕರಗಿರುತ್ತದೆ (ಕೆಲವೊಮ್ಮೆ ಮೊಟ್ಟೆಗಳು ಕರಗಲು 7–10 ದಿನಗಳಾಗಬಹುದು) ಈ ಮಿಶ್ರಣವನ್ನು ಸೋಸಿ 1:10 ಪ್ರಮಾಣ ನೀರಿನಲ್ಲಿ ಬೆರೆಸಿ ತಿಂಗಳಿಗೊಮ್ಮೆ ಭೂಮಿಗೆ ಸಿಂಪಡಿಸಬಹುದು. ಇದರಿಂದ ಮಣ್ಣಿನಲ್ಲಿ ಸೂಕ್ಷ್ಮಾಣು ಜೀವಿಗಳು ಹೆಚ್ಚಾಗಿ ಫಲವತ್ತತೆ ಹೆಚ್ಚಾಗುವುದರೊಂದಿಗೆ ಇಳುವರಿ ಸಹ ಹೆಚ್ಚಾಗುವುದು.

ಈ ಮಿಶ್ರಣದಲ್ಲಿ ಸಹಸ್ರಾರು ಸೂಕ್ಷ್ಮಾಣು ಜೀವಿಗಳು ಉತ್ಪತ್ತಿಯಾಗಿ ಬೆಳೆಗಳಿಗೆ ಬೇಕಾಗುವ ಪೋಷಕಾಂಶಗಳನ್ನು ಒದಗಿಸಲು ಸಹಾಯ ಮಾಡುತ್ತವೆ. ಈ ಮಿಶ್ರಣವು 10 ಕುಂಟೆ ಭೂಮಿಗೆ ಸಿಂಪಡಿಸಬಹುದು.

# ಸಂಘದಿಂದ ಗ್ರಾಮ ವಿಧಾನಸಭೆಯ ತನಕ...

ಶ್ರೀಮತಿ ಸೆಲೆಸ್ಸಿನ್ ಮಿನೇಜಸ್ ಇವರು 5/2/1969 ರಲ್ಲಿ ನಾರಾವಿಯ ಆಟ್ಯಡ್ಡ ಎಂಬ ಗ್ರಾಮದಲ್ಲಿ ಜನಿಸಿದರು. ಇವರು 1 ವರ್ಷ 3 ತಿಂಗಳು ಇರುವಾಗ ತಾಯಿ ತೀರಿದರು. ನಂತರ ತಂದೆ, ಅಜ್ಜ, ಅಜ್ಜಿ ಇವರನ್ನು ಬೆಳೆಸಿದರು. 7 ನೇ ತರಗತಿಯವರೆಗೆ ಶಾಲೆಗೆ ಕಳುಹಿಸಿದರು. ನಂತರ ಒಂದು ಮನೆಯ ಕೆಲಸಕ್ಕೆ ಕಳುಹಿಸಿದರು. 19 ನೇ ವರ್ಷದಲ್ಲಿ ಶ್ರೀಮಾನ್ ಲೂಕಸ್ ಮಿನೇಜಸ್ ಇವರೊಂದಿಗೆ ವಿವಾಹವಾಯಿತು. ಇವರ ಕುಟುಂಬದವರು ತುಂಬಾ ಚೆನ್ನಾಗಿ ಇದ್ದರು. ಆದರೆ ಸೆಲೆಸ್ಸಿನ್ ಇವರಿಗೆ ಈ ಕುಟುಂಬದಲ್ಲಿ ತುಂಬಾ ಸಮಯ ಜೀವಿಸಲು ಸಾಧ್ಯವಾಗಲ್ಲಿಲ್ಲ. ಮದುವೆ ಆದ ಎರಡನೇ ವರ್ಷದಲ್ಲಿ ಅತ್ತೆ, ಮಾವ, ತಮ್ಮ, ತಂಗಿ ಇವರು ಮರಣ ಹೊಂದಿದರು. ನಂತರ ಉಳಿದ ಮೂವರು ಮಾತ್ರ ಲೂಕಸ್, ಸೆಲೆಸ್ಸಿನ್ ಮತ್ತು ಮಾನಸಿಕವಾಗಿ ನರಳುತ್ತಿದ ಅಣ್ಣ. ಸೆಲೆಸ್ಸಿನ್ ಇವರಿಗೆ 13 ವರ್ಷದ ನಂತರ ಇಬ್ಬರು ಮಕ್ಕಳನ್ನು ಪಡೆದರು. ನಂತರ ಅವರ ಹಳೆಯ ಮನೆಯನ್ನು ಸ್ವಲ್ಪ ಮಟ್ಟಿಗೆ ಸರಿಪಡಿಸಿದರು. ತಮ್ಮ ತೋಟದಲ್ಲಿ ಕೆಲವು ಕೃಷಿ ಮಾಡಿ, ಅಡಿಕೆ, ತೆಂಗಿನಕಾಯಿ, ವೀಳ್ಯದೆಲೆ, ಬೆಂಡೆ, ಅಳಸಂದೆ, ಸೌತೆ, ಮುಳ್ಳು ಸೌತೆ ಬೆಳೆಸಿ ಹುಕ್ರಟ್ಟೆಯಿಂದ ಬಜಗೋಳಿಗೆ ತಂದು ಮಾರಾಟ ಮಾಡುತ್ತಿದ್ದರು. ಇದರಿಂದ ಬಂದ ಲಾಭ ಮನೆಗೆ ಮತ್ತು ಮಕ್ಕಳಿಗಾಗಿ ಉಪಯೋಗಿಸಿತ್ತಿದ್ದರು.

ನಂತರ 2006 ರಲ್ಲಿ ಸಂತ ವಿಕ್ಟರ್ ಮಹಿಳಾ ಸ್ವ–ಸಹಾಯ ಸಂಘಕ್ಕೆ ಸೇರಿದರು. ಮೌಂಟರೋಜರಿ ಸಂಸ್ಥೆಯಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯದನ ದೊರೆಕಿತು. ಇದರಿಂದ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಲು ಸಾಧ್ಯವಾಯಿತು. ನಂತರ ಸ್ವ ಸಹಾಯ ಸಂಘಕ್ಕೆ ಸೇರಿ ತಮ್ಮ ಸಮಸ್ಯೆಗೆ ಪರಿಹಾರ, ಬೇರೆ ಬೇರೆ ಸ್ವ–ಉದ್ಯೋಗ ಮಾಡುವ ವಿಧಾನ ಕಲಿತು ಇದನ್ನು ಜೀವನದಲ್ಲಿ ಅಳವಡಿಸಿಕೊಂಡು ಗುಂಪಿನಲ್ಲಿ ಸಾಲ ಪಡೆದು ಕೃಷಿ ಅಭಿವೃದ್ಧಿ ಮಾಡಿ ಅದರಿಂದ ಪ್ರತಿಫಲವನ್ನು ಪಡೆಯುತ್ತಿದ್ದಾರೆ. ಇದರಿಂದ ತಿಂಗಳಿಗೆ ಸರಾಸರಿ ರೂ. 3,000/– ರಿಂದ ರೂ. 4,000/– ಲಾಭ ಪಡೆಯುತ್ತಿದ್ದಾರೆ. ಜೊತೆಗೆ 2 ನಾಟಿ ಹಸುಗಳನ್ನು ಸಾಕಿದ್ದಾರೆ. ಇದರಿಂದ ತಿಂಗಳಿಗೆ ರೂ. 1500/– ರಿಂದ ರೂ. 2000/– ಲಾಭ ಸಿಗುತ್ತದೆ.



ಮಾತ್ರವಲ್ಲದೆ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಗ್ರಾಮ ಪಂಚಾಯತ್ ಸದಸ್ಯರಾಗಿದ್ದರು. ಗ್ರಾಮದಲ್ಲಿ, ಪರಿಸರದಲ್ಲಿ ಮುಂದಾಳತ್ವವನ್ನು ವಹಿಸಿ ಬೇರೆಯವರ ಕಷ್ಟ ದು:ಖಗಳಿಗೆ ಸ್ಪಂದಿಸುತಿದ್ದಾರೆ. ಸ್ವ–ಸಹಾಯ ಸಂಘಕ್ಕೆ ಸೇರಿದ ನಂತರ ಸಮಸ್ಯೆಗಳನ್ನು ಎದುರಿಸಲು ಮತ್ತು ಮುಂದಾಳತ್ವವನ್ನು ವಹಿಸಲು ಧೈರ್ಯ ಬಂದಿದೆ ಎಂದು ಹೇಳುತ್ತಾರೆ ಶ್ರೀಮತಿ ಸೆಲೆಸ್ತಿನ್.

# ವಾರ್ತಾ ವಿಶೇಷ

## ಕ್ರಾಸ್ ಸಂಸ್ಥೆಗೆ ಸಹಾಯಕ ನಿರ್ದೇಶಕರ ನೇಮಕ :

ಶ್ರೀ ರಿಚ್ಚರ್ಡ್ ಮಾರ್ಟಿಸ್



ಅಖಿಲ ಕರ್ನಾಟಕದ ಕಥೋಲಿಕಾ ಧರ್ಮಾಧ್ಯಕ್ಷರುಗಳ ಮಂಡಳಿಯ ಅಧ್ಯಕ್ಷರು, ಬೆಂಗಳೂರು ಮಹಾಧರ್ಮಕ್ಷೇತ್ರದ ಮಹಾ ಧರ್ಮಾಧ್ಯಕ್ಷರಾದ ಅತೀ ವಂದನೀಯ ಡಾ. ಬರ್ನಾಡ್ ಮೊರಾಸ್‌ರವರು ಕ್ರಾಸ್ ಸಂಸ್ಥೆಯ ಸಹಾಯಕ ನಿರ್ದೇಶಕರನ್ನಾಗಿ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರನ್ನು ನೇಮಿಸಿದ್ದಾರೆ. ಗುರುವರ್ಯರು ಫೆಬ್ರವರಿ 2, 2015 ರಂದು ನಡೆದ ಸರಳ ಸಮಾರಂಭದಲ್ಲಿ ಕ್ರಾಸ್ ಸಂಸ್ಥೆಯ ಅಧ್ಯಕ್ಷರಾದ ಉಡುಪಿ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಅತೀ ವಂದನೀಯ ಡಾ. ಜೆರಾಲ್ಡ್ ಲೋಬೋರವರು ಮತ್ತು ಹಾಜರಿದ್ದವರ ಸಮ್ಮುಖದಲ್ಲಿ ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು.

ಕ್ರಾಸ್ ಸಂಸ್ಥೆಯು ವಂದನೀಯ ಸ್ವಾಮಿ ಸೆಬಾಸ್ಟಿಯನ್‌ರವರಿಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಅವರ ಸೇವಾ ಕಾರ್ಯಕ್ಕೆ ಶುಭ ಹಾರೈಸುತ್ತದೆ.

## ಪಂಚಾಯತಿ ರಾಜ್ ಸಂಸ್ಥೆಗಳಿಗಾಗಿ ಕಾರ್ಯಾಗಾರ (ಪಿ.ಆರ್.ಐ)



ಜನವರಿ 8 ಮತ್ತು 9 ರಂದು ಪಂಚಾಯತಿರಾಜ್ ಸಂಸ್ಥೆಗಳ ಕುರಿತು 2 ದಿನಗಳ ಕಾರ್ಯಗಾರವನ್ನು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಕರ್ನಾಟಕದ ವಿವಿಧ ಭಾಗಗಳಿಂದ ಸುಮಾರು 62 ಮಂದಿ ಪ್ರತಿನಿಧಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ ವರ್ಗಿಸ್. ಜಿ. ಎಂ. ರವರು ಅತೀ ಹಿಂದುಳಿದ ಮಹಿಳೆಯರಲ್ಲಿ ನಾಯಕತ್ವ ಪ್ರತಿಭೆಯನ್ನು ಗುರುತಿಸಿ ಮೌಲ್ಯಾಧಾರಿತ ನಾಯಕತ್ವ ಬೆಳೆಸಿ ಸ್ಥಳೀಯ ಆಡಳಿತದಲ್ಲಿ ಭಾಗೀದಾರರಾಗಲು ವಿವಿಧ ಪ್ರಕ್ರಿಯೆ ಮತ್ತು ವಿಧಾನಗಳ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ಪ್ರಜ್ಞೆ ಮೂಡಿಸಿದರು.

## ಕ್ರಾಸ್ ಸಂಸ್ಥೆಯ ಹೊಸ ಯೋಜನೆ 'ಪೌಷ್ಟಿಕ್' ಔಪಚಾರಿಕ ಉದ್ಘಾಟನೆ:



ಉತ್ತರ ಕರ್ನಾಟಕದ 174 ಗ್ರಾಮಗಳಲ್ಲಿನ ಮಕ್ಕಳಲ್ಲಿ, ಹದಿಹರೆಯದ ಹೆಣ್ಣುಮಕ್ಕಳಲ್ಲಿ, ಗರ್ಭಿಣಿ ಹಾಗೂ ಎದೆಹಾಲುಣಿಸುವ ತಾಯಂದಿರಲ್ಲಿ ಅಪೌಷ್ಟಿಕತೆಯನ್ನು ನೀಗಿಸುವ ಯೋಜನೆಯ ಉದ್ಘಾಟನೆಯನ್ನು ಜನವರಿ 19–20, 2015 ರಂದು ನೆರವೇರಿಸಲಾಯಿತು.

ಈ ಕಾರ್ಯಕ್ರಮವನ್ನು ಡಾ॥ ಶ್ರೀಧರ್, ಯುನಿಸೆಫ್ ಸಲಹಾ ತಜ್ಞ ಮತ್ತು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ತರಬೇತಿ ತಜ್ಞ, ಐ ಇ. ಸಿ. ವಿಭಾಗದ ಶ್ರೀಯುತ ಕೃಷ್ಣಮೂರ್ತಿಯವರು ನಿರ್ವಹಿಸಿಕೊಟ್ಟರು. ಉತ್ತರ ಕರ್ನಾಟಕದ ಕ್ರಾಸ್ ಸಹಭಾಗಿ ಸಂಸ್ಥೆಗಳ ಸಿಬ್ಬಂಧಿಯವರು ಭಾಗವಹಿಸಿದ್ದರು.

## ಭಾರತದ ಕಾನೂನು ವ್ಯವಸ್ಥೆ ಮತ್ತು ಮಾನವ ಹಕ್ಕುಗಳು ಬಗ್ಗೆ ಕಾರ್ಯಾಗಾರ:



ಮೇಲ್ಕಂಡ ಕಾರ್ಯಾಗಾರವನ್ನು ಕ್ರಾಸ್ ಸಂಸ್ಥೆಯಲ್ಲಿ ಫೆಬ್ರವರಿ 12–13, 2015 ರಂದು ನಡೆಸಲಾಯಿತು. ಕಾರ್ಯಗಾರದಲ್ಲಿ ಕೂಲಿ ಕಾರ್ಮಿಕರು, ಅಸಹಾಯಕರು, ಕಾನೂನಿನ ಅರಿವಿಲ್ಲದವರಿಗೆ ನೆರವಾಗಲು ಮತ್ತು ಜಾಗೃತಿ ಮೂಡಿಸಲು ಮನದಟ್ಟಾಗುವಂತೆ ವಿವರಿಸಲಾಯಿತು. ಕಾರ್ಯಾಗಾರವನ್ನು ಡಾ॥ ಅಂಬ್ರೋಸ್ ಪಿಂಟೊ–ಪ್ರಿನ್ಸಿಪಾಲ್, ಸೆಂಟ್ ಅಲೋಶಿಯಸ್ ಡಿಗ್ರಿ ಕಾಲೇಜು, ಬೆಂಗಳೂರು, ಖ್ಯಾತ ನ್ಯಾಯವಾದಿಗಳಾದ ಮನೋಹರ್ ಹೊಸಿಯ, ವಕೀಲರಾದ ಶ್ರೀಯುತ ಕ್ಲಿಫ್ಟನ್ ಡಿ.ರೊಸಾರಿಯೊ ಮತ್ತು ಶ್ರೀಯುತ ರಾಬಿನ್ ಕ್ರಿಸ್ಟೋಫರ್ ನೆರವೇರಿಸಿದರು.

## 'ಉದ್ದಿಮೆ ಅಭಿವೃದ್ಧಿ ಮತ್ತು ವ್ಯವಹಾರ ಕೌಶಲ್ಯಗಳು' ಬಗ್ಗೆ ಕಾರ್ಯಾಗಾರ:



ಫೆಬ್ರವರಿ 23 ಮತ್ತು 24 ರಂದು "ಕಿರು ಉದ್ದಿಮೆಯಲ್ಲಿ ಮಹಿಳೆಯರು" ಪಾತ್ರದಯೋಜನೆಯಡಿಯಲ್ಲಿ ನಿಯೋಜಿಸಿದ್ದ ಕಾರ್ಯಗಾರದಲ್ಲಿ ಕ್ರಾಸ್ ಸಂಸ್ಥೆಯ ಪಾಲುದಾರ ಸಂಸ್ಥೆಯ ಕಾರ್ಯಕರ್ತರು ಭಾಗವಹಿಸಿದ್ದರು. ಕಿರು ಉದ್ದಿಮೆಯಲ್ಲಿನ ಆಂತರ್ಯವನ್ನು ಮನದಟ್ಟಾಗುವಂತೆ ವಿವರಿಸಿ ಕಾರ್ಯಗಾರವನ್ನು ಶ್ರೀಮತಿ ಕೋನಿ ಆಳ್ವರವರು ನಡೆಸಿಕೊಟ್ಟರು.

### ಬೆಳ್ಳಿ ಹಬ್ಬ ಮಹೋತ್ಸವ :



ಕ್ರಾಸ್ ಸಂಸ್ಥೆಯ ಪಾಲುದಾರ ಸಂಸ್ಥೆಯಾದ ಶಿವಮೊಗ್ಗ ವಿವಿದೋದ್ದೇಶ ಸಮಾಜ ಸಂಸ್ಥೆಯ ಬೆಳ್ಳಿ ಹಬ್ಬ ಮಹೊತ್ಸವವು ಮಾರ್ಚ್ 9 ರಂದು ಜರುಗಿತು. ಪೂಜ್ಯ ಸೆರಾಫೊ ಹಾಗೂ ನಿಡು ಮಾಮಿಡಿ ಶ್ರೀಗಳ ಉಪಸ್ಥಿತಿಯಲ್ಲಿ ಬೆಂಗಳೂರು ಮಹಾಧರ್ಮಕ್ಷೇತ್ರದ ಮಹಾ ಧರ್ಮಾಧ್ಯಕ್ಷರಾದ ಅತೀ ವಂದನೀಯ ಡಾ. ಬರ್ನಾಡ್ ಮೊರಾಸ್‌ರವರ ಆಶೀರ್ವಚನದೊಂದಿಗೆ ಅನೇಕ ಗಣ್ಯ ವ್ಯಕ್ತಿಗಳ ಹಾಗೂ ಸಹಸ್ರಾರು ಜನರ ಸಮ್ಮುಖದಲ್ಲಿ ವಿಜೃಂಬಣೆಯಿಂದ ನಡೆಸಲಾಯಿತು. ಕ್ರಾಸ್ ಸಂಸ್ಥೆ ಶಿವಮೊಗ್ಗ ವಿವಿದೋದ್ಧೇಶ ಸಮಾಜ ಸಂಸ್ಥೆಗೆ ಶುಭಕಾಮನೆಗಳನ್ನು ಕೋರುತ್ತಾ ಬೆಳ್ಳಿ ಬೆಳೆದ ಸಂಸ್ಥೆ ಬಂಗಾರ ಬೆಳೆಯಲಿ ಎಂದು ಆಶಿಸುತ್ತೇವೆ.



### ಮಕ್ಕಳ ಮಾರಾಟ ಮತ್ತು ಸಾಗಾಟದ ವಿರುದ್ಧ ಸಮಾಲೋಚನಾ ಸಭೆ :

ಮಾರ್ಚ್ 12 ರಂದು ಕ್ರಾಸ್ ಸಂಸ್ಥೆಯ ಆಶ್ರಯದಲ್ಲಿ ಮಕ್ಕಳ ಮಾರಾಟ ಮತ್ತು ಸಾಗಾಟದ ವಿರುದ್ಧ ಮಾಡಬೇಕಾದ ಮುಂಜಾಗ್ರತಾ ಕ್ರಮದ ಬಗ್ಗೆ ಚರ್ಚಿಸುವ ಉದ್ದೇಶದಿಂದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ಸರಕಾರದ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗದ ಸದಸ್ಯರಾಗಿರುವ ವಂದನೀಯ ಸ್ವಾಮಿ. ಎಡ್ವರ್ಡ್ ತೋಮಸ್‌ರವರು ಈ ಕಾರ್ಯಗಾರವನ್ನು ಉದ್ಘಾಟಿಸಿದರು. ರಾಜ್ಯ ಸರಕಾರದ ಮತ್ತು ಸರ್ಕಾರೇತರ ಸಂಸ್ಥೆಗಳಿಂದ 150 ಪ್ರತಿನಿಧಿಗಳು ಹಾಜರಿದ್ದರು. ವಿವಿಧ ಸಲಹೆ ಸೂಚನೆಗಳನ್ನು ರಾಜ್ಯ ಮಕ್ಕಳ ಆಯೋಗಕ್ಕೆ ಸಲ್ಲಿಸಲಾಯಿತು.

### ಜೀವನೋಪಾಯದ ಆಯ್ಕೆಯ ಹಕ್ಕಿನ ಬಗ್ಗೆ ಕಾರ್ಯಗಾರ:



ಮಾರ್ಚ್ 16ರಿಂದ 18ರವರೆಗೆ ಮೇಲ್ಕಂಡ ವಿಷಯದ ಬಗ್ಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಗಾರವನ್ನು ನುರಿತ ಸಂಪನ್ಮೂಲ ವ್ಯಕ್ತಿಗಳಾದ ಸಿಸ್ಟರ್ ದುಲ್ಸಿನ್ ಕ್ರಾಸ್ತ ಯುನಿಸೆಫ್‌ನ ಸಲಹಾಗಾರರು, ಶ್ರೀಯುತ ವೈ.ಜಿ. ಮುರಳಿಧರ್ – ಕ್ರಿಯೇಟ್ ಸಂಸ್ಥೆಯ ನಿರ್ದೇಶಕರು, ಶ್ರೀಯುತ ಬಿ. ಯೋಗನಾಥ್ ಸಿಂಗ್– ಆಡಳಿತ ತರಬೇತಿ ಸಂಸ್ಥೆಯ ಹಿರಿಯ ಸಂಪನ್ಮೂಲ ವ್ಯಕಿಗಳು, ವಕೀಲರಾದ ಶ್ರೀಯುತ ರಾಬಿನ್ ಕ್ರಿಸ್ಟೊಫರ್ ಮತ್ತು ಕ್ರಾಸ್ ಸಂಸ್ಥೆಯ ಸಂಯೋಜಕರಾದ ಶ್ರೀಯುತ ಜಿ . ಯಂ. ವರ್ಗೀಸ್‌ರವರು ನಡೆಸಿಕೊಟ್ಟರು. ಕಾರ್ಯಾಗಾರದಲ್ಲಿ ಸುಮಾರು 60 ಮಂದಿ ಭಾಗವಹಿಸಿ ಜಾಗೃತಿಹೊಂದಿದರು.

### ವಿದೇಶಿ ಕೊಡುಗೆ ಕಾಯಿದೆ ಮತ್ತು ಆದಾಯ ತೆರಿಗೆ ನಿಯಮಗಳ ಬಗ್ಗೆ ಕಾರ್ಯಾಗಾರ:



ರಾಜ್ಯದ ವಿವಿಧ ಸ್ವಯಂ ಸೇವಾ ಮತ್ತು ದತ್ತಿ ಸಂಸ್ಥೆಗಳಿಗಾಗಿ ಕೇಂದ್ರ ಸರ್ಕಾರದ ನೂತನ ಕಾಯಿದೆಗಳ ಬಗ್ಗೆ ಮಾರ್ಚ್ 19 ರಂದು ಕ್ರಾಸ್ ಸಂಸ್ಥೆಯಲ್ಲಿ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರವನ್ನು ತಜ್ಞ ಲೆಕ್ಕಿಗರಾದ ಶ್ರೀಯುತ ವಿಟ್ಟಲ್ ರಾವ್ ಲೊಕರೆಯವರು ನಡೆಸಿಕೊಟ್ಟರು. ಕರ್ನಾಟಕದ ವಿವಿಧ ಭಾಗಗಳಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳ 150 ವ್ಯವಸ್ಥಾಪಕರು ಮತ್ತು ಅಧಿಕಾರಿಗಳು ಆಗಮಿಸಿದ್ದರು.

**ಇದೇ ಸಂಧರ್ಭದಲ್ಲಿ 'ಆಂತರೀಕ ಕಲಿಕಾ ಮತ್ತು ನಿಗಾವಹಿಸುವಿಕೆ ನಿಯಮ'ದ ಸಶಕ್ತತೆಯೆಡೆಗೆ ದಿಟ್ಟ ಹೆಜ್ಜೆಗಳು ಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು.**

### ಮಕ್ಕಳ ಹಕ್ಕುಗಳ ಸಂರಕ್ಷಣಾ ನೀತಿಯ ಬಗ್ಗೆ ಕಾರ್ಯಾಗಾರ



ಕ್ರಾಸ್ ಸಂಸ್ಥೆಯ ಸಂಪನ್ಮೂಲ ಕೇಂದ್ರದಲ್ಲಿ ಮಾರ್ಚ್ 20ರಿಂದ 21 ರವರೆಗೆ ಮಕ್ಕಳ ಹಕ್ಕುಗಳ ಸಂರಕ್ಷಣಾ ನೀತಿ ನಿರೂಪಣಾ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಪೂಜ್ಯ ಫಾ. ಪೀಟರ್ ಬ್ರ್ಯಾಂಕ್ ಕಾರ್ಯಾಗಾರವನ್ನು ಉದ್ಘಾಟಿಸಿದರು. ಕರ್ನಾಟಕ ಸರ್ಕಾರದ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗದ ಸದಸ್ಯರಾಗಿರುವ ವಂದನೀಯ ಸ್ವಾಮಿ. ಎಡ್ವರ್ಡ್ ತೋಮಸ್ ಮತ್ತು ಅಂತರಾಷ್ಟ್ರೀಯ ಸೇವಾ ಮಂಡಳಿಯ ಶ್ರೀಮತಿ ಎಡ್ವಿನ್ ಪಿರೇರಾರವರು ನಮ್ಮ ಸಂಸ್ಥೆಗಳಲ್ಲಿ ನೀತಿನಿರೂಪಣೆಗೆ ಕಾಯಕಲ್ಪ ನೀಡಲು ಮಾರ್ಗದರ್ಶನ ನೀಡಿದರು.



### ಶುಭ ವಿದಾಯ :

ಶ್ರೀಯುತ ಐವನ್ ಸಿಕ್ವೇರಾ ರವರು ಸಮೃದ್ಧಿ ಸಂಸ್ಥೆಯಲ್ಲಿ ಸುಮಾರು ಒಂದೂವರೆ ವರ್ಷಗಳವರೆಗೆ ಲೆಕ್ಕಿಗರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಉದ್ಯೋಗದ ನಿಮಿತ್ತ ದುಬೈನಲ್ಲಿ ನೆಲೆಸಿದ್ದಾರೆ. ಶ್ರೀಯುತರಿಗೆ ಕ್ರಾಸ್ ಸಂಸ್ಥೆಯು ಶುಭ ಹಾರೈಸುತ್ತದೆ.

ಪ್ರತಿಗಳಿಗಾಗಿ ಸಂಪರ್ಕಿಸಿ :

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ,
ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com | www.krossbangalore.org